ಪ್ರ. ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು

ಸಿ.ಸಿ. ನಂ.**3363/2023.**

ದಿನಾಂಕಃ**13-11-2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ಕುಮಾರಾಸ್ವಾಮಿ | ಚಾಸಾ-10<br>ಪ್ರಾಸಾ-4 |
| ತಂದೆಯ ಹೆಸರು | ಲೇಟ್ ಗುರುಸಿದ್ದಯ್ಯ | |
| ವಯಸ್ಸು | 42 ವರ್ಷ | |
| ಉದ್ಯೋಗ | ಹೆಚ್ ಸಿ 07, ಕಡೂರು ಪೊಲೀಸ್ ಠಾಣೆ | |
| ವಾಸ | ಕಡೂರು | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಾನು ದಿಃ07.01.2023 ರಿಂದ ಕಡೂರು ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 18.03.2023 ರಂದು ನಾನು ಪೊಲೀಸ್ ಠಾಣಾ ಪ್ರಭಾರದಲ್ಲಿ ಇದ್ದಾಗ ರಾತ್ರಿ 10.15 ಗಂಟೆಗೆ ಚಾಸಾ 8 ರವರು ಚಸಾ 1 ರವರು ಕಳುಹಿಸಿಕೊಟ್ಟ ವರದಿಯನ್ನು ತಂದು ಹಾಜರುಪಡಿಸಿದ್ದು, ಅದನ್ನು ಸ್ವೀಕರಿಸಿ ಠಾಣಾ ಮೊ.ಸಂ.71/2023 ರಂತೆ ಪ್ರಕರಣದ ದಾಖಲಿಸಿರುತ್ತೇನೆ ಹಾಗೂ ಪ್ರ.ವ.ವರದಿಯನ್ನು ಮೇಲಾಧಿಕಾರಿಯವರಿಗೆ ಮತ್ತು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ದೂರನ್ನು ಮತ್ತು ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ವರದಿಯಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು ಹಾಗೂ ಸದರಿ ಪ್ರ.ವ.ವರದಿಯನ್ನು ನಿಪಿ 5 ಎಂದು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ನಂತರ ಮುಂದಿನ ತನಿಖೆಗೆಂದು ಪ್ರಕರಣದ ಕಡತವನ್ನು ಚಾಸಾ-1 ರವರಿಗೆ ಹಸ್ತಾಂತರಿಸಿರುತ್ತೇನೆ.

ಪಾಟೀಸವಾಲುಃ ಆರೋಪಿ ಪರ ಶ್ರೀ.ಎಸ್ ಎನ್ ಎ ವಕೀಲರಿಂದ

ಆರೋಪಿಯ ಯಾವುದೇ ತಪ್ಪು ಕಂಡುಬರದೇ ಇದ್ದರು ಸಹಃ ಚಾಸಾ 1 ರವರು ಹೇಳಿದ ಕಾರಣಕ್ಕೆ ಆರೋಪಿ ವಿರುದ್ದ ಸುಳ್ಳು ಪ್ರ.ವ.ವರದಿ ದಾಖಲು ಮಾಡಿರುತ್ತೇನೆ

ಎಂದರೆ ಸರಿಯಲ್ಲ. ನಾನು ಯಾವುದೇ ವರದಿಯನ್ನು ಸ್ವೀಕರಿಸಿಲ್ಲ ಎಂದರೆ ಸರಿಯಲ್ಲ. ಠಾಣಾಅಂಕಿಅಂಶಕ್ಕಾಗಿ ಸುಳ್ಳು ಕೇಸು ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಪ್ರ. ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.